## 2003ರ ಕರ್ನಾಟಕ ಅಧಿನಿಯಮ ಸಂಖ್ಯೆ 11

# ಕರ್ನಾಟಕ ಧನವಿನಿಯೋಗ ಅಧಿನಿಯಮ, 2003

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2002-2003 ನೇ ಹಣಕಾಸು ವರ್ಷಕ್ಕಾಗಿ 3532,80,52,000 ರೂಪಾಯಿಗಳ ನೀಡಿಕೆ

3. ಧನವಿನಿಯೋಗ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2002-2003 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನು ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 (1)(ಎ)ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 12)

(ಭಾರತ ಸಂವಿಧಾನದ 204ನೇ ಅನುಚ್ಛೇದ)

## 2003ರ ಕರ್ನಾಟಕ ಅಧಿನಿಯಮ ಸಂಖ್ಯೆ 11

*(2003ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ಧನವಿನಿಯೋಗ ಅಧಿನಿಯಮ, 2003

*(2003ರ ಮಾರ್ಚ್ ಇಪ್ಪತ್ತೊಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)*

2002-2003 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ಅಧಿನಿಯಮ.

2002-2003 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಐವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. **ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 2003 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2002-2003 ನೇ ಹಣಕಾಸು ವರ್ಷಕ್ಕಾಗಿ 3532,80,52,000 ರೂಪಾಯಿಗಳ ನೀಡಿಕೆ.-** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 2002-2003ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊತ್ತದಲ್ಲಿ ಮೂರು ಸಾವಿರದ ಐದುನೂರು ಮೂವತ್ತೆರಡು ಕೋಟಿ ಎಂಬತ್ತು ಲಕ್ಷದ ಐವತ್ತೆರಡು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದು ಮತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ.-** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 336 ದಿನಾಂಕ: 31.3.2003 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 20 ಶಾಸನ 2003

**ಅನುಸೂಚಿ**

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | | ಮೀರದ ಮೊಬಲಗು | | ಒಟ್ಟು |
|---|---|---|---|---|---|
| | | | ವಿಧಾನಸಭೆಯಿಂದ ಪುರಸ್ಕೃತವಾದುದನ್ನು | ಸಂಚಿತ ನಿಧಿಯಿಂದ ಪ್ರಭೃತವಾದುದನ್ನು | |
| 1 | 2 | | 3 | 4 | 5 |
| 1 | ಕೃಷಿ (ಬಯಲುಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ) | ರಾಜಸ್ವ | | 1081.16 | 1081.16 |
| 3 | ಪಶು ಸಂಗೋಪನೆ | ರಾಜಸ್ವ | | 534.36 | 534.36 |
| 4 | ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ | ರಾಜಸ್ವ | | 2263.80 | 2263.80 |
| | | ಬಂಡವಾಳ | | 332.52 | 332.52 |
| 5 | ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಮಾ.ತಂ ಬಿಟ್ಟು) ಮೂಲಭೂತ-ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರಿಕ ವಿಮಾನಯಾನ | ರಾಜಸ್ವ | | 201.09 | 201.09 |
| | | ಬಂಡವಾಳ | | 1094.00 | 1094.00 |
| 7 | ಚಿಕ್ಕಪುಟ್ಟ ಉದ್ಯಮಗಳು | ರಾಜಸ್ವ | | 1520.00 | 1520.00 |
| 8 | ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು | ರಾಜಸ್ವ | | 136.74 | 136.74 |
| | | ಬಂಡವಾಳ | | 501.20 | 501.20 |

| 1 | 2 | | 3 | 4 | 5 |
|---|---|---|---|---|---|
| 9 | ಉನ್ನತ ಶಿಕ್ಷಣ | ರಾಜಸ್ವ | | 27.06 | 27.06 |
| 10 | ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ | ರಾಜಸ್ವ | | 15.01 | 15.01 |
| | | ಬಂಡವಾಳ | 157.00 | | 157.00 |
| 11 | ಲೇಖನ ಸಾಮಗ್ರಿ ಮತ್ತು ಮುದ್ರಣ | ಬಂಡವಾಳ | | 35.00 | 35.00 |
| 12 | ಯುವಜನ ಸೇವೆಗಳು | ರಾಜಸ್ವ | | 117.50 | 117.50 |
| 13 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ | | 111.30 | 111.30 |
| 14 | ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು | ರಾಜಸ್ವ | | 2040.00 | 2040.00 |
| 15 | ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು | ರಾಜಸ್ವ | | 25.00 | 25.00 |
| 17 | ಖಜಾನೆ ಮತ್ತು ಲೆಕ್ಕಗಳ ಆಡಳಿತ | ರಾಜಸ್ವ | | 55.69 | 55.69 |
| 19 | ರಾಜ್ಯ ಅಬಕಾರಿ | ರಾಜಸ್ವ | | 168.92 | 168.92 |
| 22 | ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ | ರಾಜಸ್ವ | 7.00 | | 7.00 |
| 23 | ಸಚಿವಾಲಯ | ರಾಜಸ್ವ | | 53.35 | 53.35 |

| 1 | 2 | | 3 | 4 | 5 |
|---|---|---|---|---|---|
| 24 | ಸಾಮಾನ್ಯ ಆಡಳಿತ | ರಾಜಸ್ವ | 78.47 | 1017.25 | 1095.72 |
| 25 | ವಿದ್ಯುಚ್ಛಕ್ತಿ ಯೋಜನೆಗಳು | ರಾಜಸ್ವ | | 27.80 | 27.80 |
| 26 | ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ | ರಾಜಸ್ವ | | 0.01 | 0.01 |
| 27 | ಮುಜರಾಯಿ (ವಕ್ಫ್ ಮತ್ತು ಹಜ್ ಹೊರತುಪಡಿಸಿ) | ರಾಜಸ್ವ | | 1.40 | 1.40 |
| 28 | ಬಂದೀಖಾನೆ, ಗೃಹ ರಕ್ಷಣಾ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ | ರಾಜಸ್ವ | | 174.00 | 174.00 |
| 29 | ಆಹಾರ ಮತ್ತು ನಾಗರೀಕ ಸರಬರಾಜು | ರಾಜಸ್ವ | | 130.91 | 130.91 |
| | | ಬಂಡವಾಳ | | 71.22 | 71.22 |
| 30 | ಅರಣ್ಯ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ | ರಾಜಸ್ವ | 22.95 | 723.44 | 746.39 |
| 31 | ಸಾರಿಗೆ ಸೇವೆಗಳು | ರಾಜಸ್ವ | | 9.08 | 9.08 |
| 32 | ಒಳಾಡಳಿತ (ಪೊಲೀಸ್ ಜಾಗೃತ ದಳ ಹೊರತುಪಡಿಸಿ) | ರಾಜಸ್ವ | | 5438.21 | 5438.21 |
| 33 | ವಾರ್ತಾ ಮತ್ತು ಪ್ರಚಾರ | ರಾಜಸ್ವ | | 20.00 | 20.00 |
| 35 | ಕೃಷಿ ಮಾರುಕಟ್ಟೆ | ರಾಜಸ್ವ | | 197.28 | 197.28 |

| 1 | 2 | | 3 | 4 | 5 |
|---|---|---|---|---|---|
| 36 | ವಸತಿ | ರಾಜಸ್ವ | | 2500.00 | 2500.00 |
| 37 | ನಗರಾಭಿವೃದ್ಧಿ ಪ್ರಾಧಿಕಾರಗಳು (ಬೆಂ.ಅ.ಯೋ. ಹೊರತುಪಡಿಸಿ)<br>ನಗರ ಪಾಲಿಕೆಗಳು (ಬೆಮಪಾ ಹೊರತುಪಡಿಸಿ)<br>ನಗರ ಯೋಜನೆ ಇಲಾಖೆ | ರಾಜಸ್ವ | | 757.48 | 757.48 |
| 38 | ಭಾರಿ ಮತ್ತು ಮಧ್ಯಮ ನೀರಾವರಿ | ಬಂಡವಾಳ | | 17170.21 | 17170.21 |
| 39 | ಸಣ್ಣ ನೀರಾವರಿ (ಅಂತರ್ಜಲ ಹೊರತುಪಡಿಸಿ) | ರಾಜಸ್ವ<br>ಬಂಡವಾಳ | | 50.00<br>1450.01 | 50.00<br>1450.01 |
| 40 | ರಾಜ್ಯ ಶಾಸಕಾಂಗ | ರಾಜಸ್ವ | | 76.50 | 76.50 |
| 41 | ನ್ಯಾಯ ಪರಿಪಾಲನೆ | ರಾಜಸ್ವ | | 56.85 | 56.85 |
| 42 | ಕಂದಾಯ (ವಕ್ಫ್, ಹಜ್ ಮತ್ತು ಮುಜರಾಯಿ ಹೊರತುಪಡಿಸಿ) | ರಾಜಸ್ವ | | 19190.07 | 19190.07 |
| 43 | ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ<br>(ವಿಜ್ಞಾನ ಮತ್ತು ತಂತ್ರಜ್ಞಾನ ಹೊರತುಪಡಿಸಿ) | ರಾಜಸ್ವ | | 39.71 | 39.71 |
| 44 | ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು<br>ಒಳನಾಡು ಸಾರಿಗೆ ಹೊರತುಪಡಿಸಿ) | ರಾಜಸ್ವ<br>ಬಂಡವಾಳ | 9.11<br>13.40 | 2748.80<br>8932.08 | 2757.91<br>8945.48 |

| 1 | 2 | | 3 | 4 | 5 |
|---|---|---|---|---|---|
| 45 | ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ) | ರಾಜಸ್ವ | | 4.00 | 4.00 |
| | | ಬಂಡವಾಳ | | 400.05 | 400.05 |
| 46 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ | ರಾಜಸ್ವ | | 17113.19 | 17113.19 |
| 47 | ಕಾರ್ಮಿಕ ಮತ್ತು ವಕ್ಫ್ | ರಾಜಸ್ವ | | 743.00 | 743.00 |
| 48 | ಸಮಾಜ ಕಲ್ಯಾಣ | ರಾಜಸ್ವ | | 345.96 | 345.96 |
| 49 | ಮಹಿಳಾ ಮತ್ತು ಶಿಶು ಕಲ್ಯಾಣ | ರಾಜಸ್ವ | | 3542.91 | 3542.91 |
| 50 | ವೈದ್ಯಕೀಯ ಶಿಕ್ಷಣ | ರಾಜಸ್ವ | 1.75 | 200.00 | 201.75 |
| 51 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಜಸ್ವ | | 1113.75 | 1113.75 |
| | | ಬಂಡವಾಳ | | 1666.00 | 1666.00 |
| 52 | ಮಾಹಿತಿ ತಂತ್ರಜ್ಞಾನ | ರಾಜಸ್ವ | | 339.19 | 339.19 |
| 53 | ಸಕ್ಕರೆ | ರಾಜಸ್ವ | | 0.50 | 0.50 |
| | | ಬಂಡವಾಳ | | 4636.96 | 4636.96 |
| 54 | ಬಡ್ಡಿ ಸಂದಾಯ | ರಾಜಸ್ವ | 586.89 | | 586.89 |

| 1 | 2 | | 3 | 4 | 5 |
|---|---|---|---|---|---|
| 55 | ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಮುಂಗಡಗಳು ಹಾಗೂ ರಾಜ್ಯ ತೀರುವಿಕೆಗಳು | ಬಂಡವಾಳ | 250180.30 | | 250180.30 |
| 59 | ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ | ರಾಜಸ್ವ | | 318.30 | 318.30 |
| 60 | ನಗರ ಪುರಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತ್‌ಗಳು | ಬಂಡವಾಳ | | 691.83 | 691.83 |
| 61 | ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ | | 12.00 | 12.00 |
| | ಒಟ್ಟು | ರಾಜಸ್ವ | **706.17** | **65242.57** | **65948.74** |
| | | ಬಂಡವಾಳ | **250350.70** | **36981.08** | **287331.78** |
| | | ಒಟ್ಟು ಮೊತ್ತ | **251056.87** | **102223.65** | **353280.52** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಇಲಾಖೆ.